ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 561/2023

(ಪ್ರಾಸಾ-3 ಚಾಸಾ-3)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 11.09.2024

| | | |
|---|---|---|
| ಸಾಕ್ಷಿದಾರರ ಹೆಸರು | - | ಲೋಹಿತ್ |
| ತಂದೆಯ ಹೆಸರು | - | ಗಣೇಶ್ |
| ವಯಸ್ಸು | - | 41 ವರ್ಷ, |
| ಉದ್ಯೋಗ | - | ಡಾಬಾ ವ್ಯಾಪಾರ |
| ವಾಸ | - | ದ್ವಾರಕನಗರ, ಚಿಕ್ಕಬಾಣಾವರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಹೆಸರಘಟ್ಟ ಮುಖ್ಯ ರಸ್ತೆಯಲ್ಲಿ ನನ್ನ ಮಾಲೀಕತ್ವದ ಹಿಮಾಲಯ ಡಾಬಾ ಇರುತ್ತದೆ. ಪ್ರಾಸಾ-2 ಇವರು ಸದರಿ ಡಾಬಾದಲ್ಲಿ ಅಡಿಗೆಯವರಾಗಿ ಕೆಲಸ ಮಾಡುತ್ತಿದ್ದರು.

2. ದಿಃ13.01.2023 ರಂದು ರಾತ್ರಿ ಸುಮಾರು 10.50 - 11.00 ಘಂಟೆ ಸಮಯದಲ್ಲಿ ಪ್ರಾಸಾ-2 ಇವರು ಕೆಲಸ ಮುಗಿಸಿಕೊಂಡು ಮನೆಗೆ ಹೊರಟು ಮೂರು ನಿಮಿಷಗಳಲ್ಲಿ ಮತ್ತೆ ಡಾಬಾಕ್ಕೆ ವಾಪಸ್ಸಾಗಿ ಡಾಬಾದ ಬೋರ್ಡ್ ಮುಂದೆ ಯಾರೋ ಬಿದ್ದು ಹೋಗಿದ್ದಾರೆ ಎಂದು ಹೇಳಿದ್ದು ನಾನು ಪ್ರಾಸಾ-2 ಇವರ ಜೊತೆಗೆ ಅಲ್ಲಿಗೆ ಹೋಗಿ ನೋಡಲಾಗಿ ಒಬ್ಬ ವ್ಯಕ್ತಿ ರಕ್ತಸಿಕ್ತನಾಗಿ ಬಿದ್ದಿದ್ದು ನಾನು ಪೋಲಿಸರಿಗೆ ಫೋನ್ ಮಾಡಿ ಹೇಳಲಾಗಿ ಪೋಲಿಸರು 5-6 ನಿಮಿಷಗಳ ಅವಧಿಯಲ್ಲಿ ಪೋಲಿಸರು ಸ್ಥಳಕ್ಕೆ ಬಂದರು. ನಂತರ ಇನ್ನೊಬ್ಬ ವ್ಯಕ್ತಿಯು ದಾರಿಯಿಂದ ಬಂದು ಬಿದ್ದನು. ಅವನನ್ನು ನಾನು ಸರಿಯಾಗಿ ನೋಡಲಿಲ್ಲ. ನನಗೆ ಚುಚ್ಚಿರುತ್ತಾರೆ ಎಂದು ಇನ್ನೊಬ್ಬ ವ್ಯಕ್ತಿ ಹೇಳುತ್ತಿದ್ದರು. ನಂತರ ಸದರಿ ಇಬ್ಬರು ಗಾಯಾಳುಗಳನ್ನು ಪೋಲಿಸರು ಸಪ್ತಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

3. ದಿಃ27.01.2023 ರಂದು ಪೋಲಿಸರು ನನಗೆ ನಮ್ಮ ಡಾಬಾದ ಸಿಸಿಟಿವಿ ಫುಟೇಜ್ ತಂದು ಕೊಡಲು ನೋಟೀಸ್ ನೀಡಿದ್ದು ದಿಃ28.01.2023 ರಂದು ನಾನು ಪೋಲಿಸ್ ಠಾಣೆಗೆ ಹೋಗಿ ಸದರಿ ಸಿಸಿಟಿವಿ ಫುಟೇಜ್ ಇವರು ಪೆನ್ ಡ್ರೈವ್ ಅನ್ನು ಪೋಲಿಸರಿಗೆ ಹಾಜರುಪಡಿಸಿದೆನು.

(ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಮುಂದಿರುವ ಸೀಲ್ ಮಾಡಿದ ಕವರ್ ಅನ್ನು ತೆರೆಯಲು ಅನುಮತಿ ಕೋರಿದ್ದು ಅದು ಸೀಲ್ ಆಗಿದ್ದು ತೆರೆಯಲು ಅನುಮತಿ ನೀಡಲಾಯಿತು)

ಸಾಕ್ಷಿಗೆ ಈಗ ಪೆನ್ ಡ್ರೈವ್ ಅನ್ನು ತೋರಿಸಿದ್ದು ಸದರಿ ಪೆನ್ ಡ್ರೈವ್ ನಾನು ಪೋಲಿಸರಿಗೆ ನೀಡಿದ್ದು ಇದೆ ಎಂದು ಸಾಕ್ಷಿ ಹೇಳುತ್ತಾರೆ. ಈ ದಿನ ತೆರೆದ ನ್ಯಾಯಾಲಯದಲ್ಲಿ ಸದರಿ ಪೆನ್ ಡ್ರೈವ್ ನಲ್ಲಿರುವ ವಿಡಿಯೋವನ್ನು ಪ್ಲೇ ಮಾಡಿ ಸಾಕ್ಷಿಗೆ ತೋರಿಸಿಲಾಗಿ ಸಾಕ್ಷಿ ಅದನ್ನು ನೋಡಿ ಸದರಿ ಪೆನ್ ಡ್ರೈವ್ ಅನ್ನು ತಾನು ಪೋಲಿಸರಿಗೆ ಹಾಜರುಪಡಿಸಿದ್ದು ಎಂದು ನೋಡಿ ಗುರ್ತಿಸಿರುತ್ತಾರೆ.

4. ಸದರಿ ಪೆನ್ ಡ್ರೈವ್ ನೀಡುವಾಗ 65-ಬಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ಪೆನ್ ಡ್ರೈವ್ ಅನ್ನು ನಿಪಿ-3 ಎಂದು ಗುರ್ತಿಸಲಾಯಿತು. ಸಾಕ್ಷಿ 65-ಬಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರ್ತಿಸಲಾಯಿತು. ನಿಪಿ-4 ರಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4(ಎ) ಎಂದು ಗುರ್ತಿಸಲಾಯಿತು.

<u>**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎಂಎನ್‌ವಿ**</u>

<u>**(ಪ್ರಧಾನ ಕಾನೂನು ಅಭಿರಕ್ಷಕರು) ವಕೀಲರಿಂದಃ**</u>

(ಆರೋಪಿ ಪರ ವಕೀಲರು ನಿಪಿ-3 ಪೆನ್ ಡ್ರೈವ್ ನ ಡಿಜಿಟಲ್ ಪ್ರತಿಯನ್ನು ಆರೋಪಿಗೆ ನೀಡಿಲ್ಲವೆಂದು ಆದ ಕಾರಣ ಅದನ್ನು ಕೂಲಂಕೂಶವಾಗಿ ನೋಡದೇ ಪಾಟೀ ಸವಾಲು ಮಾಡಲು ಸಾಧ್ಯವಾಗುವುದಿಲ್ಲ ಆದ್ದರಿಂದ ಪಾಟೀ ಸವಾಲು ಮಾಡಲು ಸಮಯವಕಾಶ

ಕೋರಿರುತ್ತಾರೆ. ಮಾನ್ಯ ಎಸ್ಪಿಪಿರವರು ಮುಂದಿನ ತಾರೀಖಿನ ಒಳಗಾಗಿ ಪೋಲಿಸರಿಂದ ಸದರಿ ಸಿಸಿಟಿವಿ ಫುಟೇಜ್ ನ ನಕಲನ್ನು ಆರೋಪಿ ಪರ ವಕೀಲರಿಗೆ ಕೊಡಿಸುವುದಾಗಿ ತಿಳಿಸಿದ್ದಾರೆ. ಸದರಿ ಸಿಸಿಟಿವಿ ಫುಟೇಜ್ ಮಹತ್ವಪೂರ್ಣ ದಾಖಲಾತಿ ಆಗಿರುವುದರಿಂದ ಹಾಗೂ ನ್ಯಾಯದ ದೃಷ್ಟಿಯಿಂದ ಪಾಟೀ ಸವಾಲನ್ನು ಮುಂದೂಡಲಾಯಿತು).

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು